ದಿನ ಪತ್ರಿಕೆ

Reg No. M 1299
Daily & Weekly

For All Kinds of
Printing & Binding
The
Satyavadi
Press

SATYAVADI—Oldest Newspaper of Mysore

ಸತ್ಯವಾದಿ

ಸಂಪುಟ 26 ಸಂಚಿಕೆ 31[illegible]] ಮಂಗಳವಾರ 8—6—1943 [3 ಪೈ

Opera — Aryamala
ಅಪೆರಾ——
4 ನೇ ಅಮೋಘ ವಾರ
ಆರ್ಯಮಾಲ
ಪಿ. ಯು. ಚಿನ್ನಪ್ಪ, ಸಂತಾನಲಕ್ಷ್ಮಿ, ಶಕುಂತಲ, ಕೃಷ್ಣ, ಮಧುರಂ ಮುಂತಾದವರು ಪಾತ್ರವಹಿಸಿರುವರು

ಲವೆಲ್ಲರ ಬೇಡಿಕೆ!

ಫ್ರಾನ್ಸಿನಿಂದ ಲಾವಲ್ ಆಕಾಶವಾಣಿಯಲ್ಲಿ ಹೀಗೆ ಹೇಳಿರುವನು—

ಈಗ ಫ್ರಾನ್ಸ್ ಸರಕಾರವನ್ನು ನಡೆಸುವುದು ತೀರ ಕಷ್ಟ. ನಾನು ಮಾಡಲು ಏನೂ ಸೇನೆ ಬೇಕು, ಸೇನೆ ಬೇಕು. ಫ್ರಾನ್ಸ್ ನಾಶವಾಗುವುದನ್ನು ನಾನು ನೋಡಲಾರೆ. ಮುಂದೆ ಫ್ರಾನ್ಸ್ ಯೂರೋಪಿನ ರಾಜ್ಯಗಳಲ್ಲಿ ಹಿಂದಿನಂತೆ ಹೆಸರೆತ್ತಿ ಖ್ಯಾತಿಯಿಂದ ಬಾಳಬೇಕು. 1942 ರ ಸೇನೆಗಳು ಕೂಡಲೇ ಒಂದು ಜಮಾಯಿಸಬೇಕು. ಸರ್ಕಾರಿ ನಿಬಂಧನೆಯನ್ನು ಮಾರಿದರೆ ಯಾರಿಗೂ ಕ್ಷೇಮವಿಲ್ಲ. ಏಪ್ರಿಲ್ 1 ರಿಂದ ಜುಲೈ 1 ರವರೆಗೆ ಚರ್ಮ ನಿಗೆ ಕಾಲು ಮಿಲಿಯ ಫ್ರೆಂಚ್ ಕಲಸ ಗಾರರು ಹೋಗಬೇಕು. ಹಿಂದೆ ನಾನು ಹಿಟ್ಲರ್ ಸಂಗಡ ಮಾತನಾಡಿದಾಗ ಈ ಒಪ್ಪಂದ ಮಾಡಿಕೊಂಡು ಒಂದಿದ್ದೆ ಇದಲ್ಲದೆ ಇನ್ನು ಕೆಲವು ಹೊಸ ಬೇಡಿಕೆಯನ್ನು ಹಿಟ್ಲರ್ ಕೇಳಿದ್ದನು. ಹಿಟ್ಲರ್ ಮತ್ತು ಇಟಲಿಯ ವಿದೇಶಾಂಗ ಮಂತ್ರಿ ಸಿಂಗ್‌ನಾರ್ ಇವರಿಗೆ ಜಾಸ್ತಿಯಾಗಿ ಫ್ರಾನ್ಸ್ ಸ್ಥಿತಿ ಚೆನ್ನಾಗಿ ತಿಳಿದಿದೆ. ನಾವು ಬೋಲ್ಷೆವಿಜಂ ವಿಷಯವಾಗಿ ಚೆನ್ನಾಗಿಯೇ ಮಾತನಾಡಿದೆವು

ಬೆಂಗಳೂರು ಜೂನ್ 7

ನಿನ್ನೆ ದಿವಸ ಸರ್ಕಾರದ ಡೆಪ್ಯುಟಿ ಕಂಟ್ರೋಲರಾದ ಶ್ರೀ ವೈ. ಸುಬ್ರಹ್ಮಣ್ಯಂರವರು ತಮ್ಮ ೭೭ ನೇ ಮಗ ಶ್ರೀ ಕೃಷ್ಣಮೂರ್ತಿಗೂ ಮತ್ತು ತಮ್ಮ ಸಹೋದರರಾದ ಶ್ರೀ ನಾರಾಯಣಂರಾಯರ ಮಗ ಶ್ರೀ ಲಕ್ಷ್ಮೀನರಸಿಂಹನಿಗೂ ಉಪನಯನದ ಮಹೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಿದರು.

ಸೂಚನೆ— ಇನ್ನು ಮುಂದೆ ನಮ್ಮ ರಜಾ ದಿವಸವನ್ನು ಗುರುವಾರದಿಂದ ಬುಧವಾರಕ್ಕೆ ಒದಲಾಯಿಸಿಕೊಂಡಿರುತ್ತೇನೆ.

ವಿಶ್ವ ಪಕ್ಷದವರಿಗೆ

ಹಿಟ್ಲರ್ ಸಹಾಯಮಾಡಿದ!

ಟ್ಯುನಿಷಿಯಾ ಯುದ್ಧದಲ್ಲಿ ಕಾರ್ಪೋರಲ್ ಹಿಟ್ಲರ್ ಸಹಾಯ ಮಾಡಿದನೆಂದು ಮಿ || ಚರ್ಚಿಲ್ಲರು ಹೇಳುತ್ತಾರೆ.

ಎರಡನೇ ರಣರಂಗ

ಆಫ್ರಿಕಾ ಸಮುದ್ರ ತೀರ 3000 ಮೈಲಿ ಅಂದರೆ ಅಟ್ಲಾಸ್ ಪರ್ವತದಿಂದ ಓರ್ಕ್‌ವರೆವಿಗೆ, ಮಿತ್ರಪಕ್ಷದವರು 5 ಮುಖ್ಯವಾದ ಸೇನೆಪಂಗಡವನ್ನೂ ಹೇಳತೀರದಷ್ಟು ವಿಪುಲ ಯುದ್ಧನೌಕೆಗಳನ್ನೂ ಇನ್ನೂ ಬೇರೆ ಬೇಕಾದ ಯುದ್ಧ ಸಾಮಗ್ರಿಗಳನ್ನೂ ಜಮಾಯಿಸಿಕೊಂಡು ಯಾವ ನಿಮಿಷ ಹುಕುಂ ಕೊಡುವರೋ ಎಂದು ಕಾದಿರುವರು. ಇದನ್ನು ನೋಡಿದರೆ ಈ ಪ್ರಳಯಾಂತರದಿಂದ ಯುದ್ಧವು ಬೇಗ ಮುಗಿಯುವುದೆಂದು ಕಾಣುವುದು. ಮಿ || ಚರ್ಚಿಲರೂ, ಮಿ || ರೂಸ್ವೆಲ್ಟರೂ ಈಗ ನಡೆಸುವ ವಿವರವನ್ನು ರಷ್ಯಾ ಮತ್ತು ಚೈನಾಕ್ಕೆ ಕೂಲಂಕುಶವಾಗಿ ತಿಳಿಸಿರುತ್ತಾರೆ,

ರೋಂನಲ್ಲಿದ್ದ ಸ್ವೀಡಿಷ್ ಪ್ರಜೆಗಳು ಆ ನಗರವನ್ನು ಬಿಟ್ಟು ಹೊರಡಬೇಕೆಂದು ಸ್ವೀಡಿಷ್ ಸರಕಾರದ ಆಜ್ಞೆಯಾಗಿದೆ.

ಕಾಂಗ್ರೆಸ್ ಮುಖಂಡರನ್ನು ಭೇಟಿ ಮಾಡುವರು!

ಅಮೇರಿಕಾದಿಂದ ಮಿ || ವಿಲಿಯಂ ಫಿಲಿಪ್ಸರು ಜುಲೈ ಇಲ್ಲವೇ ಆಗಸ್ಟ್ ನಲ್ಲಿ ಭಾರತಕ್ಕೆ ಒರುವ ಯೋಚನೆ ಇತ್ತು. ಈಗ ಇವರು ಈ ತಿಂಗಳ ಅಂತ್ಯದಲ್ಲಿ ಅಥವಾ ಜುಲೈ ಪ್ರಾರಂಭದಲ್ಲಿ ಭಾರತಕ್ಕೆ ಬರುತ್ತಾರೆಂದೂ ಒಂದಕೂಡಲೆ ಗಾಂಧೀಜಿ, ಶ್ರೀ ನೆಹರು ಮುಂತಾದವರನ್ನು ನೋಡುತ್ತಾರೆಂದೂ ಹೇಳಲಾಗಿದೆ.

ಇಟಲಿಯ ಮೇಲೆ

ಇಟಲಿಯ ಸ್ಪೆಜಿಯಾ ರೇವಿನ ಮೇಲೆ ಬ್ರಿಟಿಷ್ ವಿಮಾನಗಳ ಧಾಳಿ ನಡೆದು ಅನೇಕ ಸೌಕೆಗಳು ನೀರಿನ ಪಾಲಾದವು. ಪಾಂಸ್ಟಿಲೇರಿಯ ಮೇಲೆ ಮತ್ತೆ ಪೆಲ್ ಹೊಡೆಯಲಾಯಿತು ಮುಸೋಲಿನಿಯು ಇಟಲಿಯ ಕೆಲಸಗಾರರನ್ನು ಕುರಿತು, ಎಲ್ಲರೂ ಯಾವ ಗಳಿಗೆ ಕರೆದರೂ ಬರಲು ಸಿದ್ಧರಾಗಿರಬೇಕೆಂದು ಆಜ್ಞೆ ಮಾಡಿರುವನು

ಭಾರತದಿಂದ ಬ್ರಿಟನ್ನಿಗೆ ಹಣದ ಹೊಳೆ

ಕಳ್ಳತ್ತಾ ಸೆಣಬು ಮಿಲ್ಲುಗಳಿಂದ ಭಾರತಕ್ಕೆ ಕೂಲಿಗಾರರು, ಜೇರುದಾರರು ಗಳಿಗೆ 12 ಪೌಂಡು ಸಂದಾಯವಾದರೆ ಇಂಗ್ಲೆಂಡಿಗೆ 100 ಪೌಂಡು ರವಾನೆಯಾಗುವುದೆಂದು ಮಿ || ಹರ್ಬರ್ಟ್ ಮಾರಿಸನ್ನರು ಹೇಳಿರುತ್ತಾರೆ.

ವಾರ್ತಾತರಂಗ

ಆರ್. ಎ. ಎಫ್. ವಿಮಾನ ಧಾಳಿಯಿಂದ ಜರ್ಮನಿಯಲ್ಲಿ 2 ಮೈಲ್ ಸ್ವೀಪರ್ ಅಗ್ನಿ ಪಾಲಾಯಿತು ಒಂದು ರೈಲ್ವೆ ಇಂಜಿನ್ ನೆಲಕ್ಕೆ ಉರುಳಿತು ಇನ್ನು 5 ಕ್ಕೆ ಪೂರ್ತಿ ಜಖಂ ಆಗಿ ಕೆಲಸಕ್ಕೆ ಬಾರದಂತಾಗಿದೆ.

ಂ ಂ

ಸ್ವೀಡನ್ನಿನಲ್ಲಿರತಕ್ಕ ರಿಜರ್ವ್ ಸೇನೆಗಳಿಗೆಲ್ಲಾ ಯುದ್ಧಸಿದ್ಧರಾಗಬೇಕೆಂದು ಆಜ್ಞೆಯಾಗಿದೆ.

ಂ ಂ

ಭಾರತದಿಂದ ಬರ್ಮಾ ಮೇಲೆ ಧಾಳಿ ಮಾಡುವ ಆರ್. ಎ. ಎಫ್. ವಿಮಾನ ಕಾರನು 10 ಲಕ್ಷ ಪೌಂಡು ಬಾಂಬನ್ನು ಸುಮಾರು 1 ಸಾವಿರ ಸಾರೆ ಬರ್ಮಾದ ಮೇಲೆ ವಿಮಾನದಲ್ಲಿ ಹೋಗಿದ್ದನಂತೆ.

ಂ ಂ

ಪೋರ್ಚುಗಲ್ಲಿನಿಂದ 10 ಪೌಂಡು ಬೆಲೆ ಬಾಳುವ ವಜ್ರವನ್ನು ಸರಿಯಾದ ರಕ್ಷದಾರಿಯಿಲ್ಲದೆ ಒಬ್ಬ ಜರ್ಮನಿಯವನು ಸಾಗಿಸುತ್ತಿರುವಾಗ ಪತ್ತೆಯಾಗಿ ದಸ್ತಗಿರಿಯಾದನು.

ಂ ಂ

ಅಮೇರಿಕ ವೈಮಾನಿಕರು ಹೆಚ್ಚು ಮಂದಿ ಇಂಗ್ಲೆಂಡಿಗೆ ಬಂದಿಳಿದಿರುವರು. ಚೀನಾಕ್ಕೂ ಅಮೇರಿಕ ವಿಮಾನ ಹೆಚ್ಚಾಗಿ ಬಂದಿವೆ.

ಂ ಂ

ಮಿ || ವಿ. ಡಿ. ಸವಾರ್ಕರರಂ 60 ನೇ ವರ್ಷಾಂತಿಯಲ್ಲಿ ಬೊಂಬಾಯಿನಲ್ಲಿನ ಮಹಾ ಜನರು 51 ಸಾವಿರ ರೂಪಾಯಿಗಳನ್ನು ಸರ್ ಆರ್ ಪಿ ಪರಾಂಜಪೆಯವರ ಹಸ್ತ ಕೊಟ್ಟರು.

ಂ ಂ

ತಿರುವಾಂಕೂರಿನಲ್ಲಿ ಸುಮಾರು 100 ಮಂದಿ ಸರ್ಕಾರಿ ಉದ್ಯೋಗಸ್ಥರನ್ನು ವಜಾ ಮಾಡಿರುತ್ತಾರೆ. ಇವರು ಲಂಚ ಮುಂತಾದವನ್ನು ತೆಗೆದುಕೊಂಡು ಸರ್ಕಾರಿ ಉದ್ಯೋಗವನ್ನು ನಡೆಸುತ್ತಿದ್ದರಂತೆ.

ಪ್ರಜಾ ಪ್ರತಿನಿಧಿ ಸಭೆ

(ನಮ್ಮ ಸ್ವಂತ ಸುದ್ದಿಗಾರರಿಂದ)

ಬೆಂಗಳೂರು ಜೂ೯ 7

ಆರನೇ ದಿನದ ಪ್ರಜಾಪ್ರತಿನಿಧಿ ಸಭೆಯು 12 ಗಂಟೆಗೆ ಯಥಾಪ್ರಕಾರ ರಾಜಮಂತ್ರಿ ಪ್ರವೀಣ ಅನಂತರಾಮಯ್ಯರವರ ಅಧ್ಯಕ್ಷತೆಯಲ್ಲಿ ನಡೆಯಿತು. ಉಪಮಂತ್ರಿಗಳು ವೇದಿಕೆಯ ಮೇಲೆ ಮಂಡಿಸಿದ್ದರು.

ಪ್ರಶ್ನೋತ್ತರಗಳು 1 ಗಂಟೆ ಕಾಲ ನಡೆಯಿತು.

ಶೃಂಗೇರಿ ನಾಗಭೂಷಣ ಭಟ್ಟರು ರೈಲ್ವೇ ವ್ಯಾಗ್ಗನ್‌ಗಳು ಸಾಮಾನಿನ ಮತ್ತು ಪ್ರಯಾಣೀಕರ ಗಾಡಿಗಳಿಗೆ 1841-42 ಮತ್ತು 42-43 ರಲ್ಲಿ ಆದ ವಿಚಾರವನ್ನು ಎತ್ತಿ ಮಾತನಾಡಿದರು.

ಹೆಂಗಿ ಚಿಕ್ಕಣ್ಣನವರು (ದೊಡ್ಡ ಬಳ್ಳಾಪುರ) ಸಂಸ್ಥಾನಾಮಳಿ ಸೈನಿಕರ ಸೌಕರ್ಯಕ್ಕಾಗಿ ಎಷ್ಟು ದಾನಕರುಗಳು ಕೊಲ್ಲಲ್ಪಟ್ಟಿವೆ ಎಂಬುದು ತಿಳಿದಿದೆಯೆ? ಹೈದರಾಬಾದು ಮುಂತಾದ ಇತರ ಸಂಸ್ಥಾನಗಳು ಗೋವಧೆಯನ್ನು ನಿಲ್ಲಿಸಿರುವುದು ಗೊತ್ತಿದೆಯೆ? ನೀವು ಇದನ್ನು ನಿಲ್ಲಿಸುವುದಕ್ಕೆ ಯಾವ ಯುಕ್ತ ಯೋಜನೆಯನ್ನು ಕೈಗೊಂಡಿದ್ದೀರಿ? ಎಂದು ಪ್ರಶ್ನಿಸಿದರು.

ಶ್ರೀಷ್ಮ ಕಾರ್ಯದರ್ಶಿಗಳು, ಇಲ್ಲಾ ಇಲ್ಲಾ, ಎಂದರು.

ದಿವಾನರು— ಶ್ರೀ ಭೂಪಾಳಂ ಚಂದ್ರಶೇಖರಯ್ಯನವರು ಮತ್ತು ಸಂಬಂಧಪಟ್ಟ ಮುಂತಾದವರು ಈ ವಿಚಾರದಲ್ಲಿ ಹಲವು ಉಪಪ್ರಶ್ನೆಗಳನ್ನು ಕೇಳಿದ ಬಗ್ಗೆ ಉತ್ತರವಾಗಿ ಹೀಗೆ ಹೇಳಿದರು— ಸಿಲೋನಿನಲ್ಲೂ ಹೀಗೆ ನಡೆಯುತ್ತಿದೆ. ವ್ಯವಸಾಯ ಮುಂತಾದ್ದಕ್ಕೆ ಉಪಯುಕ್ತವಾದ ವಿದ್ಯುಚ್ಛಕ್ತಿಯು ಒದಗದಿರುವ ಪ್ರಯುಕ್ತವೂ ಮತ್ತು ಎತ್ತು ಹಸುಗಳನ್ನು ಉಪಯೋಗಿಸುತ್ತಿರುತ್ತಾರೆಂದು ತಿಳಿಯಬಂದಿದೆ. ನಾವು ನಮ್ಮ ರಾಜ್ಯದಿಂದ ಉತ್ಕೃಷ್ಟ ತಳಿಗಳು ಹೊರಗೆ ಹೋಗಬಾರದೆಂಬ ಯೋಚನೆಯಿಂದ ಸರಕಾರದ ಅನುಮತಿ ಇಲ್ಲದೆ ಯಾರೂ ದನಕರುಗಳನ್ನು ಸಾಗಿಸಕೂಡದೆಂದು ವಿಧಿಸಿದೆ ಎಂದರು.

ನೆಲವಳ್ಳಿ ಪಟೇಲ್ ಮಹದೇವಪ್ಪನವರು— ಅಲ್ಲಿನ ಸಬ್ ಪೋಲೀಸ್ ಇನ್‌ಸ್ಪೆಕ್ಟರ ವಿಚಾರದಲ್ಲಿ ಹಾಕಿದ ಉಪಪ್ರಶ್ನೆಯು ಚರ್ಚೆಯಾಯಿತು.

ಅನಂತರ ಆಯವ್ಯಯದ ಚರ್ಚೆಯು ನಧಿಯು ಮುಂದೆ ಚರ್ಚೆಯಲ್ಲಿದೆ.

ಶ್ರೀ ನವರತ್ನ ರಾಮರಾಯರು ಹೀಗೆ ಭಾಷಣ ಮಾಡಿದರು— ನಮ್ಮ ದೇಶವು ಧೈರ್ಯ ಸ್ಥೈರ್ಯ ಉದಾರಕ್ಕೆ ತೌರೂರು. ಕಬ್ಬಿಣ ವರ ಉಕ್ಕು ಚಿನ್ನದ ಗಣಿಯಾಗಿದೆ. ಇದೇ ಗುಣ. ದೋಷವೆಂದರೆ, ಜಮೀನುಗಳ ದುರವಸ್ಥೆ. ಅದನ್ನು ಕ್ರಮಪಡಿಸಲು ಯುಕ್ತ ಶಾಸ್ತ್ರೀಯ ಪರಿಶ್ರಮ ಶೋಧನೋಪಾಯ ತಂತ್ರಗಳು ಇಲ್ಲಾ. ರೈತನಿಗೆ ಸಾಲ ಕೊಟ್ಟ ಮಾತ್ರಕ್ಕೆ ಜಮೀನು ಅಬಾದು ಆಗುವುದು. ಸ್ವಪ್ನ ಪ್ರಾಯವಾಗಿದೆ ಆರ್ಥಿಕ ಸ್ಥಿತಿ ಬಹಳ ಶೋಚನೀಯವಾಗಿದೆ. ಶಿವಮೊಗ್ಗಾದಲ್ಲಿ ಭತ್ತದ ಬೆಳೆಗೆ ಅನುಕೂಲ ಪಟ್ಟಾಗಿದೆ. ಅಲ್ಲಿ ವ್ಯವಸಾಯ ಕ್ಷೇತ್ರಗಳನ್ನು ಸ್ಥಾಪಿಸಿ, ರೈತಾಬಾದು ಹೆಚ್ಚಳವಾಗಿ ಉತ್ತೇಜನ ಕೊಡಬೇಕು. ಕೈಗಾರಿಕೆ ಮುಂದುವರಿಯಬೇಕಾದರೆ ಇಂಡಸ್ಟ್ರಿಯಲ್ ಬ್ಯಾಂಕು ಮೂಲಕ ಹಣ ದೊರೆಯಿಸುವ ಯತ್ನ ಮಾಡಬೇಕು. ಇದಕ್ಕೆ 1 ಕೋಟಿ ಹಣ ಬೇಕಾಗುತ್ತದೆ. ಕುರುಡರ ಮತ್ತು ಮೂಗರ ಭೋಜನ ಶಾಲೆಗೆ ಕೊಡುವ ಹಣ ಉಪ್ಪು, ಸಾಲದು. ಈಗ ಬಿಕ್ಷೆ ಬೇಡಿದರೂ ಬಿಕ್ಷೆ ಸಿಕ್ಕುವುದೇ ಇಲ್ಲ. ಕುರುಡರಿಗೆ ಸಂಗೀತದಲ್ಲಿ ಅಭಿರುಚಿ ಹೆಚ್ಚು. ಆದ್ದರಿಂದ 100 ರೂ. ಗಳ ಸಂಬಳದ ಮೇಲೆ ಉತ್ತಮ ಸಂಗೀತಗಾರರಿಂದ ಪಾಠಹೇಳಿಸಬೇಕು; ಮೂಗರಿಗೂ ಗೃಹಕೈಗಾರಿಕೆಗಳಲ್ಲಿ ಶಿಕ್ಷಣವನ್ನು ಕೊಟ್ಟ ಅವರು ಸ್ವತಂತ್ರ ಜೀವಿಗಳಾಗಿ ಬೇಸರವಾಗದಂತೆ ಮಾಡಬೇಕು. 4 ಕೋಟಿ ಗಜ ಒಟ್ಟಿಯಾದರೂ ನಮಗೆ ಬೇಕು, ಇದನ್ನು ನಮ್ಮ ಸ್ವಂತಕ್ಕೂ ನಮ್ಮ ದೇಶವಾಳಿಗೂ ಆಗುವಷ್ಟಾದರೂ ಮಾಡಿ ತೀರಬೇಕು, ಅರಣ್ಯಗಳಿಂದ ಪ್ರಯೋಜನ ಬಹಳ ಉಂಟು. ಆದ್ದರಿಂದ ಗೋವಾಳಗಳನ್ನು ಹಾಳುಮಾಡಬಾರದು. ಸೌದೆ ವನೆಯ ಮರಮಟ್ಟುಗಳನ್ನು ದೊರಕಿಸಬೇಕು ಆದ್ದರಿಂದ ರಾಜ್ಯಕ್ಕೆ ಸೇರಿದ ಅರಣ್ಯವನ್ನು ಸಿಗದಿವಾಡಿ ಕಾಯ್ದುಕಾಪಾಡಬೇಕು ಎಂದು ಹೇಳಿದರು.

ಶ್ರೀ ಸೇತಾರಾಮು ಶಾಸ್ತ್ರಿಗಳು ಈ ರೀತಿ ಮಾತನಾಡಿದರು— ಕೈಗಾರಿಕೆ ಸಂಸ್ಥೆಗಳಿಗೆ ನಿವೃತ್ತ ಸರ್ಕಾರಿ ಅಧಿಕಾರಿಗಳನ್ನು ನಾಮಕರಣ ಮಾಡುವುದರಿಂದ ಹೆಚ್ಚು ತೊಂದರೆಯಿದೆ ಈ ಪದ್ಧತಿ ಖಂಡಿತ ಹೋಗಬೇಕು. ಮುಖ್ಯವಾಗಿ ಹೊರಗಿನವರಿಗೇನೇ ಎಡೆಂಬರಾಗಿ ದೇಮಕ ಮಾಡುವ ಪದ್ಧತಿ ಶುದ್ಧ ತಪ್ಪು. ಮೈಸೂರಿನವರನ್ನೇ ನೇಮಿಸಬೇಕು

ಆಯುರ್ವೇದ ವೈದ್ಯ ಯುನಾನಿ ವೈದ್ಯದ ವಿಚಾರವಾಗಿಯೂ ಮತ್ತು ರಾಷ್ಟ್ರೀಯ ರಕ್ಷಣಾಬಲದ ವಿಚಾರವಾಗಿಯೂ ಮಾತನಾಡಿ ಇವಕ್ಕೆಲ್ಲಾ ಹೆಚ್ಚಿನ ಹಣ ಕೊಡಬೇಕೆಂದರು.

ಅಕ್ಷರ ಸಾರ್ವಜನಿಕ
ಭಾವಪರಿಪೂರ್ಣವಾದ ಕಥೆ
ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ
ರೆಗೂ ಊಟಕ್ಕೆ ಕೂಡ ಏಳಲು ಮನ
ಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇ.
ಜು 1 ಆಣೆ. ಮುಂಗಡ ಕಳುಹಿಸಬೇಕು
ದೊರೆಯುವ ಸ್ಥಳ—
ಸತ್ಯವಾದಿ ಆಫೀಸ್ ಮೈಸೂರು

For good printing
Saraswati Printing Press
Lansdowne Buildings, Mysore
Lakshminarasimha Press
Srirampet, Mysore

Ranjit — Satyabhama
ರಣಜಿತ್ ಟಾಕೀಸ್
ವೈ. ವಿ. ರಾವ್ ಮತ್ತು ಪುಷ್ಪವಲ್ಲಿ
ಪಾತ್ರವಹಿಸಿರುವ
[ತೆಲುಗು] ಸತ್ಯಭಾಮಾ [ತೆಲುಗು]
ಶಕ್ತಿ ಸಾಧನೆಗೆ ಸುಲಭೋಪಾಯವು
ರಸಾಯನ ರಾಜ
ಸಿದ್ಧಿ
ಸೇವನೆ ಎಂಬುದು ನಿಮ್ಮ ಜ್ಞಾನದಲ್ಲಿರಲಿ.
ಅನೇಕರಿಂದ ಪ್ರಶಂಸಿಸಲ್ಪಟ್ಟಿದೆ. ವಸ್ತುಪ್ರದರ್ಶನಗಳಲ್ಲಿ ಪ್ರಾಶಸ್ತ್ಯವನ್ನು ಪಡೆದಿದೆ
ಬೆಲೆ 1 ರೂಪಾಯಿ
ಹೆಚ್. ಆರ್. ಜಿ. ಸಿ. ಯವರ
ಶ್ರೀ ಪಿಕ್ಚರ್ಸ್ ತಯಾರಿಕೆ
ವಾಣಿ OR [Violinist]
ಎಂಬ ಕನ್ನಡ ಸಾಮಾಜಿಕ ಚಿತ್ರ
ನಿಮ್ಮ ಮನರಂಜನೆಗಾಗಿ ಬೇಗಲೇ ಬರಲಿದೆ

Edited, Printed & published by M. S. Krishna Rao, at the Satyavadi Press. Chamaraja Agrahar, Mysore.